“ನಾನು ಯೋಚಿಸುತ್ತೇನೆ.”

“ಯೋಚಿಸಲು ಏನೂ ಇಲ್ಲ... ಈ ಜ್ವರದ ದಿನಗಳಲ್ಲಿ ನೀವು ಏನನ್ನು ಚಿಂತಿಸುತ್ತಿದ್ದೀರಿ ಎಂದು ನನಗೆ ಚೆನ್ನಾಗಿಯೇ ಗೊತ್ತು... ಬೇಸರವಾಗಿರುವುದರಿಂದ ಹೊರಟುಬಿಡುವ ಎಂದು ಅಂದುಕೊಂಡಿದ್ದೀರಿ. ಆದರೆ ಹೊರಡಲಾಗುತ್ತಿಲ್ಲ. ಹಿಡಿದಿಟ್ಟಿರುವುದು ಏನೆಂದು ತಿಳಿಯುತ್ತಿಲ್ಲ. ಅದನ್ನೇ ನಿಮ್ಮೊಳಗೆ ಹುಡುಕಾಡುತ್ತಿದ್ದೀರಿ. ಅದನ್ನು ಕಂಡು ಹಿಡಿದಿರಾ...”

“ಇಲ್ಲ... ಅದನ್ನು ನನ್ನಿಂದ ವಿವರಿಸಲು ಆಗುತ್ತಿಲ್ಲ.”

“ಆದರೆ ಕಂಡು ಹಿಡಿದುಬಿಟ್ಟಿದ್ದೀರಿ... ನಾನು ನಿಮ್ಮ ನಾಡಿಗಳನ್ನು ಮುಟ್ಟಿದಾಗ ಅವು ಮತ್ತೆ ದೃಢವಾಗಿ ತುಡಿಯುವುದನ್ನು ನೋಡಿದೆ. ನಾವು ಅದನ್ನು ಇಚ್ಛಾನಾಡಿ ಎನ್ನುತ್ತೇವೆ. ನೀವು ಬದುಕಲು ಇಚ್ಛಿಸುತ್ತೀರಿ.”

“ನನಗೆ ಗೊತ್ತಿಲ್ಲ” ಎಂದರು ಬಾಪೂ. “ಆದರೆ ನಿನ್ನೆ ರಾತ್ರಿ ನಾನು ನಿರ್ಧಾರ ಮಾಡಿದೆ. ಸಾಕು ಎಂದು... ಆ ನಿರ್ಧಾರದೊಂದಿಗೆ ಕಣ್ಣು ಮುಚ್ಚಿದೆ. ಬೆಳಗ್ಗೆ ನಾನು ಕಣ್ಣು ತೆರೆಯುವುದಿಲ್ಲ ಎಂದೇ ಅಂದುಕೊಂಡೆ. ನನ್ನ ದೇಹ ತೂಕ ಕಳೆದುಕೊಂಡು ಗಾಳಿಯಲ್ಲಿ ಅಲೆದಾಡಿದಂತೆ ಭಾವಿಸಿದೆ. ಆದರೆ ಸ್ವಲ್ಪ ಮೊದಲು ಒಂದು ಕನಸು.”

ಭೈರಾಗಿ ನೋಡುತ್ತಿದ್ದರು.

“ಒಂದು ಮಗು ದೊಡ್ಡದೊಂದು ಮಣ್ಣಿನ ಮಡಕೆಯೊಂದಿಗೆ ರಸ್ತೆಯ ಬದಿಯಲ್ಲಿ ಕುಳಿತಿದೆ... ಬತ್ತಿ ಒಣಗಿದ ಹಳ್ಳಿಯ ಮಗು... ಬಹುಶಃ ಅದು ಒಂದು ಹರಿಜನ ಮಗು. ಆ ಖಾಲಿ ಮಡಕೆಯಿಂದ ಅದು ಏನನ್ನೋ ತೆಗೆದು ತಿನ್ನುತ್ತಿದೆ. ನಾನು ಮಡಕೆಯೊಳಗೆ ನೋಡಿದೆ. ನಾನು ಗಾಬರಿಯಿಂದ ಮಗುವನ್ನು ನೋಡಿದೆ. ಅದು ಮಗುವೇ ಅಲ್ಲ. ಒಬ್ಬ ಮುದುಕ. ಮೂರು ವರ್ಷದ ಮಗುವಿನಂತೆಯೇ ಇರುವ ಹಣ್ಣುಮುದುಕ... ಅಷ್ಟೇ ಎಚ್ಚರವಾಯಿತು...” ಬಾಪೂ ನಿಟ್ಟುಸಿರುಬಿಟ್ಟರು. “ಕ್ರೂರವಾದ ಕನಸು... ಆದರೆ ಅದು ಬಂದ ತಕ್ಷಣ ಮನಸ್ಸು ತಿಳಿಯಾಯಿತು.”

“ಆ ದೃಶ್ಯವನ್ನು ನೀವು ಸಣ್ಣ ಮಗುವಾಗಿದ್ದಾಗ ನಿಜವಾಗಲೂ ನೋಡಿರಬಹುದು...” ಎಂದರು ಭೈರಾಗಿ. “ಕಳೆದ ನೂರು ವರ್ಷಗಳಿಂದ ಪರಕೀಯರ ಆಡಳಿತದಲ್ಲಿ ಈ ದೇಶ ಕ್ಷಾಮದಿಂದ ಅಳಿದುಹೋಗುತ್ತಿದೆ. ಈ ದೇಶದ ಪ್ರಜೆಗಳು ಕೋಟಿಕೋಟಿಯಾಗಿ ಸತ್ತು ಒಣಎಲೆಗಳಂತೆ ರಾಶಿಬಿದ್ದು ಕೊಳೆತು ಅಳಿದುಹೋಗುತ್ತಿದ್ದಾರೆ. ಇಲ್ಲಿರುವ ಹಿಂದುಳಿದ ಜಾತಿಯ ಜನಗಳು ಬಹುಶಃ ಅಳಿದುಹೋಗಿದ್ದಾರೆ...”

ಬಾಪೂ ನಿಟ್ಟುಸಿರು ಬಿಟ್ಟರು.

“ಅವರಿಗೆ ನೀವು ಮಾಡಬೇಕಾದ ಕರ್ತವ್ಯ ಇನ್ನೂ ಬಾಕಿ ಇದೆ... ನೀವು ನಿಮ್ಮ ಆಜ್ಞೆಯನ್ನು ಪಡೆದುಕೊಂಡದ್ದು ಲಂಡನಿನಲ್ಲೋ ದಕ್ಷಿಣ ಆಫ್ರಿಕಾದಲ್ಲೋ ಅಲ್ಲ, ಪೋರ್‌ಬಂದರಿನಲ್ಲಿ. ಅದನ್ನು ತಿಳಿದುಕೊಳ್ಳಲು ಹಲವು ವರ್ಷಗಳು ಹಿಡಿದವು.”

“ಹೌದು.”

ಭೈರಾಗಿ, “ಕನಸು ಅದನ್ನೇ ಹೇಳುತ್ತಿದೆ. ಆದರೆ...”

“ಆದರೇ?”

“ಇನ್ನೂ ಹೇಳುತ್ತಿದೆ. ಅದನ್ನು ನಂತರ ಅರಿತುಕೊಳ್ಳುವಿರಿ... ಹೇಗೆ ನಿಮ್ಮ ಹುಟ್ಟಿನ ಉದ್ದೇಶವನ್ನು ಅರಿತುಕೊಂಡಿದ್ದೀರೋ, ಹಾಗೆ. ನೀವು ಮಾಡಬೇಕಾದದ್ದು ತುಂಬಾ ಉಳಿದಿದೆ. ನೀವು ಬದುಕಲೇಬೇಕು.”

“ಹೌದು.”